## ನಕ್ಕುಬಿಡಿ



ತಾಯಿ: ಏನೇ ಇದು? ಹಾಲು ಉಕ್ಕುತ್ತಾ ಇದ್ದರೂ ನೋಡುತ್ತಾ ಇದ್ದೀಯಾ?

ಮಗಳು: ನೀನೇ ಹೇಳಿದ್ದಿ ಅಮ್ಮ ಹಾಲು ಉಕ್ಕುತ್ತೆ. ನೋಡ್ತಾಯಿರು ಅಂತ.

★★★

ಗೃಹಿಣಿ: ನನ್ನ ಯಜಮಾನರಿಗೆ ಮರೆವು ಹೆಚ್ಚಾಗಿದೆ ಡಾಕ್ಟ್ರೇ, ಪದೇ ಪದೇ ಬಾಚಣಿಗೆಯಿಂದ ತಲೆ ಬಾಚಿಕೊಳ್ಳುತ್ತಾರೆ.

ಡಾಕ್ಟರ್: ಅದರಲ್ಲಿ ತಪ್ಪೇನಿದೆ? ಬಾಚಿಕೊಳ್ಳಲಿ ಬಿಡಿ ಮೇಡಮ್.

ಗೃಹಿಣಿ: ಆದರೆ ಅವರಿಗೆ ತಲೆಯಲ್ಲಿ ಕೂದಲೇ ಇಲ್ಲ ಡಾಕ್ಟ್ರೇ.

★★★

ಮನೆಗೆ ಬಂದವರು: ಸಾರ್ ನಿಮ್ಮ ಮಗಳನ್ನು ಮದುವೆಯಾಗಲು ಇಚ್ಛಿಸುತ್ತೇನೆ.

ಹೆಣ್ಣಿನ ತಂದೆ: ನೀವು ಕುಡಿಯುತ್ತೀರಾ?

ಮನೆಗೆ ಬಂದವರು: ಅವಸರ ಏನಿಲ್ಲಾ ಸಾರ್. ಮಾತುಕತೆ ಆದ ಮೇಲೆ ಇಬ್ಬರೂ ಸೇರಿಯೇ ಕುಡಿಯೋಣ.

★★★

ಮಾವ: ಅಳಿಯಂದಿರೇ ನೀವು ನಮ್ಮ ಮನೆಗೆ ಬಂದು ಒಂದು ತಿಂಗಳಾಯಿತು. ನಿಮ್ಮ ತಾಯಿ ತಂದೆಯರ ನೆನಪು ಆಗುವುದಿಲ್ಲವೇ?

ಅಳಿಯ: ಅವರನ್ನೂ ಇಲ್ಲಿಗೇ ಕರೆಸಲಾ ಮಾವ?

★★★

**ಗುಂಡನ ನೀತಿ**

ಹಣ ನಿಮಗೆ ಹಾಸಿಗೆಯನ್ನು ನೀಡಬಹುದು– ನಿದ್ದೆಯನ್ನಲ್ಲ.

ಹಣ ನಿಮಗೆ ಮನೆ ನೀಡಬಹುದು– ವಿಶ್ರಾಂತಿಯನ್ನಲ್ಲ.

ಹಣ ನಿಮಗೆ ಪುಸ್ತಕಗಳನ್ನು ನೀಡಬಹುದು– ಜ್ಞಾನವನ್ನಲ್ಲ.

ಹಾಗಾಗಿ ನಿಮ್ಮ ಖಾತೆಯಲ್ಲಿರುವ ಹಣವನ್ನು ನನ್ನ ಖಾತೆಗೆ ವರ್ಗಾಯಿಸಿ ಸಂತೋಷವಾಗಿರಿ.

★★★

ಪುಟ್ಟ ಟೀಚರ್‌ಗೆ ಫೋನ್ ಮಾಡಿ: 'ನನ್ನ ಮಗ ಶಾಲೆಗೆ ಬರೋದಿಲ್ಲ' ಎಂದ.

ಟೀಚರ್: ನೀವು ಯಾರು ಮಾತಾಡ್ತಾ ಇದ್ದೀರಿ? 'ನನ್ನ ಅಪ್ಪ ಮಾತನಾಡ್ತಾ ಇದ್ದೇನೆ' ಎಂದ ಪುಟ್ಟ.

(ಸಂ) **ಜಗದೀಶ ಎಂ.ಸಂಗಣ್ಣವರ, ಬೆಳಗಾವಿ**

---

## ಸಮುದ್ರ ಮಥನ




**ಹೊಳಪಿನ ಹಿಂದನ ಕರಾಳ ಚಿತ್ರ**

'ವಜ್ರ ನೆತ್ತರ ಕಥೆ' ದಿಲಾವರ್ ರಾಮದುರ್ಗ ಅವರ ಮುಖಪುಟ ಲೇಖನ (ಡಿ.24) ಮನಕಲಕುವಂತಿದೆ. ಸಿರಿವಂತರ ಘನತೆ ಹೆಚ್ಚಿಸುವ ವಜ್ರದ ಹೊಳಪಿನ ಹಿಂದೆ ಶ್ರಮಿಕರ ರಕ್ತದ ಕನ್ನಡಿ ಇದೆ. ಬರಹ ಮಾನವೀಯ ಮೌಲ್ಯವನ್ನು ಪ್ರಶ್ನಿಸುವಂತಿದೆ.

–ಸು.ವಿಜಯಲಕ್ಷ್ಮಿ ಶಿವಮೊಗ್ಗ, ಬಿ.ಎಂ.ಶಿವಲಿಂಗೇಗೌಡ ಚೇವಿನಹಳ್ಳಿ, ಹೆಚ್.ಎಸ್.ಎಂ.ಪ್ರಕಾಶ್, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ ಹಾಸನ,

ವಜ್ರದ ಕಥೆ, ಶಂಕರ್‌ನಾಗ್ ನಿರ್ದೇಶಿಸಿದ ಡಾ.ರಾಜಕುಮಾರ್ ಅವರ 'ಒಂದು ಮುತ್ತಿನ ಕಥೆ' ನೆನಪಿಗೆ ಬಂತು.

–ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

**ಮನಮುಟ್ಟಿದ ಲಾವಾಸ**

ಮಠದ ವೆಂಕಟೇಶ್ ಹೊಸಪೇಟೆ ಅವರು 'ಲಾವಾಸ' ಪ್ರವಾಸ ಲೇಖನದಲ್ಲಿ ಕಣ್ಣಿಗೆ ಕಟ್ಟುವ ಚಿತ್ರಗಳನ್ನು, ಮನಸ್ಸಿಗೆ ಮುಟ್ಟುವ ಬರಹವನ್ನು ನೀಡಿದ್ದಾರೆ.

–ವಿ.ಪ್ರಾಣೇಶ್‌ರಾವ್, ವಿ.ಸುಧೀರ್ ಹೊಸಪೇಟೆ

**ಜೀವನ ಮಾರ್ಗ**

ವಿಚಾರ ಲಹರಿ 'ಮೂಚಿ' ಮದೀನಾ ಹೇಳಿಕೆಗಳನ್ನು ಬಳಸಿಕೊಂಡು ಧರ್ಮ ಸೂಕ್ಷ್ಮತೆಯನ್ನು ವಿಶ್ಲೇಷಿಸಿದ್ದಾರೆ. ಜೆನ್ ಮೂಲಕ ಮಾನವ ಮಾರ್ಗದ ದಾರಿಯನ್ನೂ ತೋರಿಸಿದ್ದಾರೆ.

–ಕೊಹಿಮಾ, ಬಸರಕೋಡು

**ಕಣ್ಣು ತೆರೆಸಿದ ಲೇಖನ**

'ನಿಮ್ಮೊಡನೆ' (ಬಿ.ಎಂ.ಹನೀಫ್)ಯಲ್ಲಿ ಮಕ್ಕಳ ಕಣ್ಮರೆ ಕುರಿತ ಬರಹ ಮನಕಲಕುವಂತಿದೆ. ನಾನು ಆಸ್ಟ್ರೇಲಿಯಾದ ಸಿಡ್ನಿಯಲ್ಲಿದ್ದು, ಬೆಂಗಳೂರಿನ ಭೇಟಿಯಲ್ಲಿದ್ದೇನೆ. ಆಸ್ಟ್ರೇಲಿಯಾದಲ್ಲಿ ಒಂದು ಮಗು ಕಣ್ಮರೆಯಾದರೂ ದೊಡ್ಡ ಸುದ್ದಿಯಾಗಿ, ಇಡೀ ನಗರವೇ ಆ ಮಗುವನ್ನು ಹುಡುಕುತ್ತದೆ. ಮೂರೂ ಕಾಲು ಲಕ್ಷ ಮಕ್ಕಳು ಪ್ರತಿವರ್ಷ ಕಣ್ಮರೆಯಾಗಿ ಅರ್ಧಕ್ಕರ್ಧ ಮಕ್ಕಳು ಮನೆಗೆ ಮರಳುವುದಿಲ್ಲವೆಂದರೆ ನಿಜಕ್ಕೂ ಆತಂಕದ ಸಂಗತಿ. ಕಣ್ಣು ತೆರೆಸುವ ಲೇಖನ.

–ಬಿ.ಎಸ್.ಕೇಶವ, ಸಿಡ್ನಿ

**ಹಲವು ಪ್ರಶ್ನೆಗೆ ಬಹುಮಾನ**

ನೀವು ಕೇಳಿದಿರಿ ಅಂಕಣದಲ್ಲಿ ರಾಮ್ ಹಲವಾರು ಬಹುಮಾನ ಯೋಗ್ಯ ಪ್ರಶ್ನೆಗಳಿಗೆ ಬಹುಮಾನಾರ್ಹ ಉತ್ತರ ನೀಡಿದ್ದಾರೆ.

–ಎಸ್.ಲಕ್ಷ್ಮಿನರಸಿಂಹ ಚಾಮರಾಜನಗರ

**ಮೆಚ್ಚುಗೆಯ ಪತ್ರಿಕೆ**

'ಸುಧಾ' ವೈವಿಧ್ಯಮಯವಾಗಿ ಮೂಡಿ ಬಂದಿದೆ. ವೈಶಿಷ್ಟ್ಯತೆಗಳ ಈ ಪತ್ರಿಕೆ ನಮ್ಮ ಮೆಚ್ಚುಗೆಗೆ ಪಾತ್ರವಾಗಿದೆ.

–ಕೆ.ಎಸ್.ನರಸಿಂಹಮೂರ್ತಿ ಮೈಸೂರು

**ವಾಸ್ತವ ಕಥೆ**

ಅಸಹಾಯಕಳಾಗಿರುವ ಹೆಣ್ಣು ಜೀವನದ ವಾಸ್ತವತೆಯನ್ನು ಒಪ್ಪುವ ಪರಿ ಮಾಲತಿ ಪಟ್ಟಣಶೆಟ್ಟಿ ಅವರ 'ನನ್ನ ಬಂಗಾರಿ' ಕಥೆಯಲ್ಲಿ ಚೆನ್ನಾಗಿ ಮೂಡಿದೆ.

–ಎಸ್.ವಿಜಯಕುಮಾರಿ, ಬೆಂಗಳೂರು

ಹೊರೆಯಾಲ ದೊರೆಸ್ವಾಮಿ ಅವರ ಪುಟ್ಟಕಥೆ 'ನಿರಾಳ' ಚೆನ್ನಾಗಿದೆ.

–ಎಸ್.ಪ್ರಭಾ, ಬೆಂಗಳೂರು

**ಖುಷಿಯಾಯಿತು**

ಯೂರೋಪಿನಿಂದ ಇಲ್ಲಿಗೆ ಬಂದ ಲಂಟಾನಾ ಗಿಡ ಬೇಲಿಗಳಿಗೆ ಸೀಮಿತವಾಗಿದೆ. ಅದರ ಸೌಂದರ್ಯವನ್ನು ತೋರಿಸಿದ ಚಿತ್ರ ಲೇಖನ 'ಚದುರಂಗಿಯ ರಂಗು' ಓದಿ ಖುಷಿಯಾಯಿತು.

–ಡಾ.ಲೀಲಾವತಿ ದೇವದಾಸ್